ನಂದಕಿಶೋರ ರಾಜಗೋಪಾಲ ಎಂಬ ಬಚ್ಚಾಳಿ ಹಣಕ್ಕಾಗಿ ತನ್ನನ್ನು ಪೀಡಿಸುತ್ತಿರುವುದನ್ನು, ಈಗ ತನ್ನನ್ನು ಹುಡುಕಿಕೊಂಡು ಇಲ್ಲಿಗೂ ಬರುವ ಸಾಧ್ಯತೆ ಇರುವುದನ್ನು ಅವನಿಗೆ ಹೇಳಿದ.

'ಅಷ್ಟೇಯಾ? ಬರಲಿ ಸರ್, ನಾನಿದ್ದೇನಲ್ಲ? ನೀವು ಒಳಗೆ ಹೋಗಿ ಕುಳಿತುಕೊಳ್ಳಿ. ಇಲ್ಲಿ ಗಲಾಟೆ ಆದರೂ ಹೊರಗೆ ಬರುವುದು ಬೇಡ. ಅವನಿಗೊಂದು ವ್ಯವಸ್ಥೆ ಮಾಡುವ' ಎಂದು ನರಸಿಂಹ ಕೋಣಗಳಿಗೆ ಬಡಿಯುವ ದೊಣ್ಣೆಯನ್ನು ಹಿಡಿದುಕೊಂಡು ನಂದಕಿಶೋರನ ಮನೆಯಂಗಳಕ್ಕೆ ಬಂದು, ಬಾವಿ ಕಟ್ಟೆಯ ಮೇಲೆ ಕುಳಿತ. ಜತೆಗೆ ಅವನ ಕೆಲಸದಾಳು ಬೊಗ್ಗು ಕೂಡ ಇದ್ದ. ಇಬ್ಬರೂ ಅಲ್ಲಿ ಮಾತಾಡುತ್ತ ಕುಳಿತಿದ್ದರು.

ನಿರೀಕ್ಷಿಸಿದ ಹಾಗೆಯೇ ಅರ್ಧ ಗಂಟೆ ಕಳೆದ ಮೇಲೆ ಒಂದು ಆಟೋರಿಕ್ಷಾ ಬಂದು ಇವರ ಅಂಗಳದಲ್ಲಿ ನಿಂತಿತು. ಅದರಿಂದ ರಾಜಗೋಪಾಲ ಇಳಿದ. ನರಸಿಂಹನಿಗೆ ಮೊದಲೇ ವಿಷಯ ಗೊತ್ತಿದ್ದುದರಿಂದ, ಬಾವಿ ಕಟ್ಟೆಯಲ್ಲಿ ಕುಳಿತಿದ್ದವನು ಎದ್ದು ಅವನತ್ತ ಹೋದ.

ನರಸಿಂಹ: ಯಾರು ಬೇಕಾಗಿತ್ತು?

ರಾಜಗೋಪಾಲ: ನಂದಕಿಶೋರ ಮಾಸ್ತರು ಬೇಕಾಗಿತ್ತು.

ನರಸಿಂಹ: ಅವರು ಪೇಟೆಗೆ ಹೋಗಿದ್ದಾರೆ. ಅಲ್ಲಿಯೇ ಮಾತಾಡಬಹುದು. ನೀವು ಇದೇ ರಿಕ್ಷಾದಲ್ಲಿ ಹಿಂದೆ ಹೋಗಿ.

ರಾಜಗೋಪಾಲ: ಇಲ್ಲ, ನಾನು ಇಲ್ಲಿಯೇ ಕಾಯುತ್ತೇನೆ. ಅವರು ಬರಲಿ. ಅವರಲ್ಲಿ ಅರ್ಜೆಂಟ್ ಕೆಲಸ ಇದೆ ನನಗೆ.

ನರಸಿಂಹ: 'ಅದೇನಿದ್ದರೂ ಪೇಟೆಯಲ್ಲಿಯೇ ಮಾತಾಡಿ. ಇಲ್ಲಿ ಅವರ ಹೆಂಡತಿ ಮಾತ್ರ ಇರುವುದು. ನಾವು ಇಲ್ಲಿಗೆ ಕೆಲಸಕ್ಕೆ ಬಂದವರು. ನಾವೂ ಹೋದರೆ ಅವರೊಬ್ಬರೇ ಇರುತ್ತಾರೆ. ಇಲ್ಲಿ ಗುರ್ತುಪರಿಚಯ ಇಲ್ಲದ ಹೊರಗಿನವರು ಬಂದರೆ ಹೆದರಿಕೆ ಅಲ್ವಾ? ಇತ್ತೀಚೆಗೆ ಕೆಲವು ಕಳ್ಳತನ ಕೂಡ ಆಗಿದೆ ಊರಿನಲ್ಲಿ. ನಿಮ್ಮ ಗುರುತು ನಮಗಿಲ್ಲ. ನೀವು ಈಗ ಹೋಗಿ, ಇಲ್ಲಿ ನಿಲ್ಲಬೇಡಿ' ಎಂದು ಸ್ವಲ್ಪ ಗಟ್ಟಿ ಸ್ವರದಲ್ಲಿ ಹೇಳಿದ.

ರಾಜಗೋಪಾಲ ಮೈಸೂರಿನಂತಹ ಸಿಟಿಯಲ್ಲಿ ಪಳಗಿದ ತನಗೆ ಈ ಹಳ್ಳಿಗನ ಭಯವೇನು ಎಂದುಕೊಂಡು, 'ಇಲ್ಲ, ನಾನು ಇಲ್ಲಿಯೇ ಕುಳಿತು ಮಾಸ್ತರು ಬರುವವರೆಗೆ ಕಾಯುತ್ತೇನೆ', ಎಂದು ಅಧಿಕಾರಯುತವಾಗಿ ಎಂಬಂತೆ ಹೇಳಿ ಜಂಭದಿಂದ ಹಳ್ಳಿಗನನ್ನು ನೋಡಿದ.

ನರಸಿಂಹ ತಣ್ಣಗೆ ಮುಂದೆ ಬಂದು, 'ಹೇಳಿದರೆ ಅರ್ಥವಾಗುತ್ತದಲ್ವಾ?' ಎಂದು ಹೇಳಿ, ಹಿಂದಿನ ಕಾಲದ ಶಿಕ್ಷಕರು ವಿದ್ಯಾರ್ಥಿಗಳಿಗೆ ಬೆತ್ತದಿಂದ ಬಾರಿಸುವ ಹಾಗೆ, ತನ್ನ ಕೈಯಲ್ಲಿದ್ದ ದೊಣ್ಣೆಯಿಂದ ರಾಜಗೋಪಾಲನಿಗೆ ಬೀಸಿ ಒಂದೇಟು ಹೊಡೆದೇ ಬಿಟ್ಟ. ಅವನ ಏಟು ಅನಿರೀಕ್ಷಿತವಾಗಿದ್ದುದರಿಂದ ರಾಜ ಒಮ್ಮೆಲೆ ಎರಡೂ ಕೈಗಳನ್ನು ಮುಂದೆ ಚಾಚಿ ತಡೆಯಲು ಪ್ರಯತ್ನಿಸಿದ. ದೊಣ್ಣೆಯ ಏಟು ದಬಕ್ಕೆಂದು ಅವನ ಪಕ್ಕೆಲುಬಿಗೆ ತಗಲಿತು.

ರಾಜ, 'ಅಯ್ಯೋ!' ಎಂದು ನೋವಿನಿಂದ ಅರಚಿ, ಗಾಬರಿಬಿದ್ದು ಓಡಿಹೋಗಿ ಆಟೋರಿಕ್ಷಾದಲ್ಲಿ ಕುಳಿತು, 'ಹೋಗುವ! ಹೋಗುವ!' ಎಂದು ಅವಸರಿಸಿದ. ಆಟೋರಿಕ್ಷಾ ಸ್ಟಾರ್ಟ್ ಆಗಿ 'ಬಂದ ದಾರಿಗೆ ಸುಂಕವಿಲ್ಲ' ಎಂಬಂತೆ ಕುಟುಕುಟು ಮಾಡಿಕೊಂಡು ಹೋಯಿತು.

ಒಂದೆರಡು ತಿಂಗಳುಗಳ ನಂತರ ನಾರಾಯಣ ತಂತ್ರಿಗಳ ಮೂಲಕ ನಂದಕಿಶೋರನಿಗೆ ರಾಮಚಂದ್ರ ರಾಯರು ತೀರಿಕೊಂಡ ಸುದ್ದಿ ಸಿಕ್ಕಿತು. ಅವರ ವೈಕುಂಠ ಸಮಾರಾಧನೆಯಲ್ಲಿ ಭಾಗವಹಿಸಿ ಮಂತ್ರಾಕ್ಷತೆಯನ್ನು ಪಡೆಯಲೇಬೇಕೆಂದು ನಿರ್ಧರಿಸಿದ ನಂದಕಿಶೋರ ಆಹ್ವಾನವಿಲ್ಲದಿದ್ದರೂ ಅದರಲ್ಲಿ ಭಾಗವಹಿಸಿದ. ಊಟ ಮಾಡಿ, ಮಂತ್ರಾಕ್ಷತೆಯನ್ನು ಪಡೆದು ಬರುವಾಗ, ತನ್ನನ್ನು ನೋಡಿ ಮುಖ ಸಿಂಡರಿಸುತ್ತಿದ್ದರೂ ರಾಜಗೋಪಾಲನ ಬಳಿಗೆ ಹೋಗಿ ಅವನ ಕೈಯಲ್ಲಿ 'ಹೊರೆಕಾಣಿಕೆ' ಎಂದು ಪಿಸುಗುಟ್ಟಿ ಒಂದು ಕವರ್ ನೀಡಿ ಬಂದ. ಅದರಲ್ಲಿ ಐದು ಸಾವಿರ ರೂಪಾಯಿಗಳನ್ನಿರಿಸಿದ್ದ.

'ಯಜಮಾನರೇ, ನಿಮ್ಮ ಋಣವನ್ನು ತೀರಿಸಲಾಗದು. ನೀವು ಮಾಡಿದ ಪುಣ್ಯಕಾರ್ಯಗಳಿಂದ ನಿಮಗೆ ಮೋಕ್ಷ ಪ್ರಾಪ್ತಿಯಾಗುತ್ತದೆ' ಎಂದು ಮನಸಿನಲ್ಲಿಯೇ ಪ್ರಾರ್ಥಿಸಿಕೊಂಡ.

ನಂದಕಿಶೋರನ ಬಗ್ಗೆ ತೀರಾ ಅಸಂತುಷ್ಟನಾಗಿದ್ದರೂ ರಾಜಗೋಪಾಲ ಹೊರೆಕಾಣಿಕೆಯನ್ನು ಸ್ವೀಕರಿಸಿ, ಅವನ ಮುಖವನ್ನೂ ನೋಡದೆ ಬೇರೆ ಕಡೆಗೆ ಹೋದ. ●